ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಸಪಟಂಬರ್ ತಾ॥ 26, ಸ್ಯ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು; ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟೋರಲರವರು, ಪಬ್ಲಿಕ್ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇರ್ಸ್ ವ ಎಡ್ಯುಕೇಶನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಪೇಯ್ಡ್ ನೋಟಿಸುಗಳು.

3ನೆ ಭಾಗ—ಲಿಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 18ನೆ ಸೆಪಟಂಬರ್ 1907.

ನಂ. 2637—ಸ್ಯಾನಿಟರಿ 34–07—4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ವಂಟೇನಹಳ್ಳಿ	...	....	...	.. ಬೇಲೂರು.
ಬೇಲೂರು ಟೌನ್	...	..	....	... ಡಿಟೋ
ಚಿಲ್ಕೂರು ಹೊಸಹಳ್ಳಿ	...	...	...	.. ಡಿಟೋ
ಅಂದೂರು	..	...	....	.. ಡಿಟೋ
ಕಣತೂರು	...	...	...	.. ಆಲೂರು ಸಬ್ ತಾಲ್ಲೂಕು.
ರಾಯಸಮುದ್ರ	...	....	..	.. ಡಿಟೋ
ಗೈರಹಳ್ಳಿ	..	...	....	.... ಚನ್ನರಾಯಪಟ್ಟಣ.
ಬ್ಯಾಡರಹಳ್ಳಿ	..	..	...	.. ಡಿಟೋ

ತಾರೀಖು 18ನೆ ಸೆಪಟಂಬರ್ 1907.

ನಂ. 2636—ಸ್ಯಾ. 22-07—10, ಘನವನ್ನೆತ್ತಿದ ಮೈಸೂರು ಸೀಮೆಯ ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿಯ ಸೆಪಟಂಬರ್ 7ನೆ ತಾರೀಖಿನ 909ನೆ ನಂಬರಿನ ಇಂಡಾರ್ಸುಮೆಂಟಿನೊಡನೆ ತಲುಪಿದ ಇದರಡಿ ಕಂಡ ಮದ್ರಾಸು ಸರ್ಕಾರದವರ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

ಬಳ್ಳಾರಿ, ಸೇಲಂ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಗಳಿಂದಲೂ ಮೈಸೂರು ಸೀಮೆಯಿಂದಲೂ ಮತ್ತು ಪ್ಲೇಗು ತಗುಲಿರುವುದಾಗಿ ಪ್ರಕಟಿಸಲ್ಪಟ್ಟಿರುವ ಇತರ ಪ್ರದೇಶಗಳಿಂದಲೂ ತಂಜಾವೂರು ಡಿಸ್ಟ್ರಿಕ್ಟ್ ಮಾಯವರಂ ಎಂಬ ಸ್ಥಳಕ್ಕೆ ಬರುವ ತಲಕಾವೇರೀ ಜಾತ್ರೆ ಕಾಲದಲ್ಲಿ ಯಾತ್ರಾರ್ಥಿ ಜನಗಳನ್ನು ಬಿಟ್ಟರೆ ಸದರಿ ಸ್ಥಳದಲ್ಲಿ ಪ್ಲೇಗು ರೋಗವು ಹುಟ್ಟುವುದೆಂಬ ಅಪಾಯವಿರುವುದಾಗಿ ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡುಬಂದಿರುವುದರಿಂದ:

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಅಕ್ಟಿನ ಮೇರೆಗೆ ಅವರಿಗೆ ಕೊಟ್ಟಿರುವ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸಮೇತರಾದ ಗವರ್ನರವರು 1907ನೆ ಇಸವಿಯ ಅಕ್ಟೋಬರ್ 10ನೆ ತಾರೀಖಿನಿಂದ ನವಂಬರ್ 15ನೆ ತಾರೀಖಿನ ವರೆಗೆ ಮೇಲೆ ಹೇಳಿದ ಸ್ಥಳಗಳಿಂದ ಸದರಿ ಜಾತ್ರೆಗೆ ಜನಗಳು ಹೋಗಕೂಡದೆಂದು ನಿಷೇಧಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವ ಜನರನ್ನೆಲ್ಲಾ ವಾಪಸು ಕಳುಹಿಸಲಾಗುವುದು.

2. ಮಾಯವರಂ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಾಲರಾ ಇರುವುದೆಂತಲೂ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ. ಯಾತ್ರಾರ್ಥಿಗಳು ಸದರಿ ಜಾತ್ರೆಗೆ ಹೋಗುವುದರಿಂದ ಎಂಥಾ ದೊಡ್ಡ ಅಪಾಯಕ್ಕೆ ಗುರಿಯಾಗುತ್ತಾರೆಂಬ ಸಂಗತಿಯನ್ನು ಈರಿತು ಅವರಿಗೆ ಎಚ್ಚರಿಸಿ ಇದೆ.

ತಾರೀಖು 18ನೆ ಸೆಪಟಂಬರ್ 1907.

ನಂ. 2639—ಸ್ಯಾನಿಟೆರಿ 78-07-2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಶಿವಮೊಗ್ಗ ಟೌನ್	ಶಿವಮೊಗ್ಗ
ಮಳಲಕೊಪ್ಪ	ಡಿಟೋ
ಸ್ಯಾಮ್ತಿ	ಹೊನ್ನಾಳಿ
ಬಸವನಹಳ್ಳಿ	ಡಿಟೋ
ಅರೇನಕೊಪ್ಪ	ಕುಂಸಿ ಸಬ್ ತಾಲ್ಲೂಕು
ಬಿಲ್ವದೇವರ ಕೊಪ್ಪಲು	ಡಿಟೋ

ತಾರೀಖು 25ನೆ ಸೆಪಟಂಬರ್ 1907.

ನಂ. 2742—ಸ್ಯಾನಿಟೆರಿ 73-07—4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ನಾಗೂನಳ್ಳಿ	ಶ್ರೀರಂಗಪಟ್ಟಣ
ರಾಮೇನಹಳ್ಳಿ	ಹುಣಸೂರು
ಹನಗೋಡು	ಡಿಟೋ
ಧರ್ಮಪುರ	ಡಿಟೋ
ಚಿಕ್ಕ ಹುಣಸೂರು	ಡಿಟೋ
ಅಲನಹಳ್ಳಿ	ಮೈಸೂರು
ದೇವೀರಮ್ಮನಹಳ್ಳಿ	ನಂಜನಗೂಡು

.233

ತಾರೀಖು 21ನೆ ಸೆಪ್ಟಂಬರ್ 1907.

ನಂ. 2664—ಸ್ಯಾನಿಟೆರಿ 79-07-2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಲ್ಲಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಶನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಈಸವನಹಳ್ಳಿ	ಬೆಂಗಳೂರು.
ಬ್ಯಾಕಹಳ್ಳಿ	ಡಿಟೋ
ತಳಿಸಂದ್ರ	ಡಿಟೋ
ವೆಂಗಟಾಲ	ಡಿಟೋ
ಕೋಗಲು	ಡಿಟೋ
ನಾಗಕೆಪ್ಪಹಳ್ಳಿ	ಡಿಟೋ
ವೆಂಕಟಾಪುರ	ಡಿಟೋ
ಕೆಂಚನಹಳ್ಳಿ	ಡಿಟೋ
ತಿಪ್ಪಸಂದ್ರ	ಡಿಟೋ
ಮುಳ್ಳೂರು	ಡಿಟೋ
ಕರೀತಿಮ್ಮನಹಳ್ಳಿ	ಡಿಟೋ
ಬೈಯಪ್ಪನಹಳ್ಳಿ	ಡಿಟೋ
ಕಾಚರಕಹಳ್ಳಿ	ಡಿಟೋ
ನಾಗವಾರ	ಡಿಟೋ
ಬೆಂಡಿಗಾನಹಳ್ಳಿ	ಡಿಟೋ
ಸಿದ್ದಾಪುರ	ಡಿಟೋ
ದೇವರಚಿಕ್ಕನಹಳ್ಳಿ	ಡಿಟೋ
ಕಾವಲಹೊಸಹಳ್ಳಿ	ಆನೇಕಲ್ಲು.
ಚಿಕ್ಕಹೊಸಹಳ್ಳಿ	ಡಿಟೋ
ಕಿತಗನಹಳ್ಳಿ	ಡಿಟೋ
ಮಾಯಸಂದ್ರ	ಡಿಟೋ
ಹೀಳಲಿಗೆ	ಡಿಟೋ
ಸರ್ಜಾಪುರ	ಡಿಟೋ
ಬಹದರಪುರ	ಡಿಟೋ
ಕಂಬಳಿಪುರ	ಡಿಟೋ
ಚಿಕ್ಕನಾಗಮಂಗಲ (ಸರ್ಜಾಪುರದ ಹೋಬಳಿ)	ಡಿಟೋ
ಮಂಚೇನಹಳ್ಳಿ	ಡಿಟೋ
ಆಲಿಬೊಮ್ಮಸಂದ್ರ	ಡಿಟೋ
ಕೊಂಸಂದ್ರ	ಡಿಟೋ
ವನಕನಹಳ್ಳಿ	ಡಿಟೋ
ಮಹಾಲ್ ಚಾಡನಹಳ್ಳಿ	ಡಿಟೋ
ಚಿಕ್ಕತಿಮ್ಮಸಂದ್ರ	ಡಿಟೋ
ಜಿಗಳೆ	ಡಿಟೋ
ಚಿಕ್ಕನಾಗಮಂಗಲ (ಅತಿಬೆಲೆ ಹೋಬಳಿ)	ಡಿಟೋ
ಸುಣ್ಣಮಂಗಲ	ಡಿಟೋ
ಭಕ್ತಿಪುರ	ಡಿಟೋ
ಹೆಬ್ಬಗೋಡಿ	ಡಿಟೋ
ಮಲ್ಲೆಪುರ	ನೆಲಮಂಗಲ.
ಗುಂಜೇನಹಳ್ಳಿ	ಡಿಟೋ
ಲಕ್ಷ್ಮಣಪುರ	ಡಿಟೋ
ದಾಬಸ್‌ಪೇಟೆ	ಡಿಟೋ
ತಾಟ್ನಹಳ್ಳಿ	ಡಿಟೋ
ಅತ್ತಿಗನಪಾಳ್ಯ	ಡಿಟೋ
ಕೊತ್ತನಹಳ್ಳಿ	ಡಿಟೋ
ಅಗಳಿಕುಪ್ಪೆ	ಡಿಟೋ
ರಾವತನಹಳ್ಳಿ	ಡಿಟೋ
ತಮ್ಮಯ್ಯನಹಳ್ಳಿ	ಡಿಟೋ
ವಡ್ಡರಪಾಳ್ಯ	ಡಿಟೋ
ಬೈಯ್ಯಪ್ಪನಹಳ್ಳಿ	ಹೊಸಕೋಟೆ.

ತಾರೀಖು 6ನೆ ಸೆಪ್ಟೆಂಬರ್ 1907.

ನಂ. ಜ. 1803—ಜ. ರಿ. 4-07—4, 1894ನೆ ಇಸವಿಯ ಜೂನ್ 10ನೆ ತಾರೀಖಿನ 21572—ಎಫ್. 99—93ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪ್ರಸಿದ್ಧಪಡಿಸಲ್ಪಟ್ಟ "ಮೈಸೂರು ಪ್ರಜಾ ಪ್ರತಿನಿಧಿಸಭೆಯ ವಿಚಾರಣೆಗೂ ಕಾರ್ಯನಿರ್ವಾಹಕ್ಕೂ ಸಂಬಂಧಪಟ್ಟ ನಿಬಂಧನೆಗಳಲ್ಲಿ" ಇದರಡಿ ಕಂಡ ಬದಲಾವಣೆಗಳು ಮಾಡಲ್ಪಡತಕ್ಕದ್ದು :—

i. 5ನೆ ಪ್ಯಾರಾವಿಗೆ ಬದಲಾಗಿ ಈ ಕೆಳಗೆ ಕಂಡ ಪ್ಯಾರಾಗಳನ್ನು ಸೇರಿಸತಕ್ಕದ್ದು :—

"5. ಪ್ರತಿನಿಧಿಗಳನ್ನು ಚುನಾಯಿಸುವವರ ಮತ್ತು ಚುನಾಯಿಸಲ್ಪಡುವುದಕ್ಕೆ ಅರ್ಹರಾದವರ ಪಟ್ಟಿಯನ್ನು ಆಷಾಢ ಶುದ್ಧ ಪೂರ್ಣಿಮಾ ದಿವಸಕ್ಕೆ ಮಿಗದಂತೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸತಕ್ಕದ್ದು. ಸದರಿ ಪಟ್ಟಿಯಲ್ಲಿ ಯಾರ ಹೆಸರು ಬಿಡಲ್ಪಟ್ಟಿದೆಯೊ ಅವರು ಅದು ಪ್ರಕಟಿಸಲ್ಪಟ್ಟಿಂದಿನಿಂದ ಹತ್ತು ದಿವಸಗಳೊಳಗಾಗಿ ಡೆಪ್ಯೂಟಿ ಕಮಿಷನರಿಗೆ ಸದರಿ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸುವ ಬಗ್ಗೆ ಅರ್ಜಿ ಕೊಡಬೇಕು.

"A. 2ನೆ ನಿಬಂಧನೆಯ ಮೇರೆಗೆ ಚುನಾಯಿಸಲ್ಪಟ್ಟವರು ಚುನಾವಣೆಯಾದ ಲಾಗಾಯಿತು 3 ವರ್ಷಗಳ ಪರ್ಯಂತ ಪ್ರಜಾ ಪ್ರತಿನಿಧಿ ಸಭೆಯ ಸಭಿಕರಾಗಿರತಕ್ಕದ್ದು"

ii. 8ನೆ ಪ್ಯಾರಾವಿನಲ್ಲಿ—"ದುರ್ಮಾರ್ಗಿ ಎಂದು ಸೂಚಿಸುವ ಕ್ರಿಮಿನಲ್ ತಪ್ಪುತವು ಸಾಬೀತಾದ" ಎಂಬ ಮಾತುಗಳಿಗೆ ಬದಲಾಗಿ ಈ ಕೆಳಗೆ ಇರುವುದನ್ನು ಸೇರಿಸತಕ್ಕದ್ದು :—

"ಪ್ರಜಾ ಪ್ರತಿನಿಧಿ ಸಭೆಯ ಸಭಿಕನಾಗುವುದಕ್ಕೆ ಅನರ್ಹನನ್ನಾಗಿ ಮಾಡುವ ಸ್ವಭಾವದ ನ್ಯೂನತೆಯನ್ನು ಸರ್ಕಾರದವರ ಅಭಿಪ್ರಾಯದಲ್ಲಿ ಸೂಚಿಸುವಂಥಾ ಯಾವುದಾದರೂ ಒಂದು ತಪ್ಪಿತವು ಸ್ಥಾಪಿಸಲ್ಪಟ್ಟ ಅಥವಾ ಅಂಥಾ ಯಾವುದಾದರೂ ಹುಕುಮಿಗೆ ಕ್ರಿಮಿನಲ್ ಕೋರ್ಟಿನವರಿಂದ ಗುರಿ ಮಾಡಲ್ಪಟ್ಟ"

ತಾರೀಖು 17ನೆ ಸೆಪ್ಟಂಬರ್ 1907.

ನಂ. 2606—ಮ್ಯು. 107-07—5, ಸ॥ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಂಗಳೂರು ಸಿಟಿಯ ಚಾಮರಾಜಪೇಟೆ ಮತ್ತು ಬಸವನಗುಡಿ ಎಕ್ಸ್‌ಟೆನ್ಷನ್‌ಗಳ ಅಭಿವೃದ್ಧಿ ಮತ್ತು ಬಡಾವಣೆಗಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಸ॥ 1907ನೆ ಇಸವಿಯ ಮೇ 30ನೆ ತಾರೀಖಿನ ಮೈಸೂರು ಗೆಜೆಟ್ಟಿನ 1ನೆ ಭಾಗದ 289ನೆ ಪುಟದಲ್ಲಿ ಪ್ರಕಟಿಸಲ್ಪಟ್ಟ 1907ನೆ ಇಸವಿಯ ಮೇ 4ನೆ ತಾರೀಖಿನ 20348—ಮ್ಯು. 8—06—55ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಗುಟ್ಟಹಳ್ಳಿ ಗ್ರಾಮದ ಸರ್ವೆ 29ನೆ ನಂಬರಿಗೆ ಸಂಬಂಧಪಡುವಷ್ಟು ಭಾಗವು ಇದರಿಂದ ರದ್ದಾಗಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜಾತಿದಾರರ ಹೆಸರು.	ಸರ್ವೆ ನಂಬರ್.	ಒಟ್ಟು ವಿಸ್ತೀರ್ಣ.	ಪರಾಬು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಗುಟ್ಟಹಳ್ಳಿ	ಪಟ್ಟೇದಾರ—ವಿ. ಕ್ಯನಾಥ ಮೊದಲಿಯಾರ್. ಹಿಡುವಳಿದಾರ—ಮಿ॥ ಪರಮಶಿವ ಅಯ್ಯರ್.	ಹಳೆ ಸರ್ವೆ ನಂ. 29 ಪೀ ಸರ್ವೆ ನಂ. 30	ಎ. ಗು. 4 17	ಗು. 8	ಎ. ಗು. 4 29	ರೂ. 10	30ನೆ ನಂಬರ್ ಜಮೀನು	ಬಸವನಗುಡಿ ರಸ್ತೆ	ಬೆಂಗಳೂರು ಸಿಟಿ	18 ಮತ್ತು 19ನೆ ನಂಬರು ಜಮೀನು

ತಾರೀಖು 18ನೆ ಸೆಪ್ಟಂಬರ್ 1907.

ನಂ. 2613—ಮೆಡಿಕಲ್ 314-06—8, ಅಸಿಸ್ಟೆಂಟ್ ಸರ್ಜನ್ ಮಿ॥ ಎಸ್. ರಂಗಣ್ಣನವರು 1907ನೆ ಇಸವಿಯ ಜೂನ್ 7ನೆ ತಾರೀಖಿನ 11506—ಮೆಡಿ. 314-06—2ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ 15 ದಿವಸಗಳ ಪ್ರಿವಿಲೇಜ್ ರಜಾವನ್ನು 1907ನೆ ಇಸವಿಯ ಮೇ 14ನೆ ತಾರೀಖಿನ ಅಪರಾಹ್ನದಿಂದ ಉಪಯೋಗಿಸಿಕೊಂಡು 1907ನೆ ಇಸವಿಯ ಮೇ 22ನೆ ತಾರೀಖಿನ ದಿವಸ ಪುನಃ ಕೆಲಸದ ಮೇಲೆ ಹಾಜರಾಗಿರುವುದರಿಂದ ಉಪಯೋಗಿಸಿಕೊಳ್ಳದೆ ನಿಂತಿರುವ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 19ನೆ ಸೆಪಟಂಬರ್ 1907.

ನಂ. ಚೆ. 903—ಕೋ. 73-07—2, 1907ನೆ ಇಸವಿಯ ಜುಲೈ 19ನೆ ತಾರೀಖಿನ ರೆ. 475—ಲ್ಯಾ. ರೆ. 500—06—5ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾವಿನಿಂದ ವಾಪಸು ಕರಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಮಿ॥ ಪಿ. ಶ್ರೀನಿವಾಸರಾಯರು ಅದೇ ತಿಂಗಳ 15ನೆ ತಾರೀಖಿನ ಪೂರ್ವಾಹ್ನದಿಂದ ಸದರಿ ರಜಾವನ್ನು ಉಪಯೋಗಿಸಿಕೊಂಡು 1907ನೆ ಇಸವಿ ಆಗಸ್ಟ್ 7ನೆ ತಾರೀಖಿನ ಅಪರಾಹ್ನದಲ್ಲಿ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಅವರಿಗೆಕೊಟ್ಟ ರಜಾವಿನಲ್ಲಿ ಉಪಯೋಗಿಸಿಕೊಳ್ಳಲ್ಪಡದೆ ನಿಂತ ಭಾಗದ ರಜಾವನ್ನು ಈಮೂಲಕ ರದ್ದುಮಾಡಿ ಇದೆ.

ತಾರೀಖು 21ನೆ ಸೆಪ್ಟಂಬರ್ 1907.

ನಂ. 2683—ಎಲ್. ಬಿ. 62—07—2, ಕಡೂರು ಡಿಸ್ಟ್ರಿಕ್ಟಿನ ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟ ಯೂನಿಯರ್ಡ್‌ಗಳಿಗೆ ಇದರಡಿ ಕಂಡವರನ್ನು ಸಭಿಕರನ್ನಾಗಿ ಮೊಕರರ್ರಮಾಡಿ ಇದೆ ಎಂದು ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಮೂಲಕ ಪ್ರಕಟಿಸಿ ಇದೆ :—

ತರೀಕೆರೆ ತಾಲ್ಲೂಕು.

ಕುಡ್ಲೂರು ಯೂನಿಯರ್ಡ್.

1.	ತಾಲ್ಲೂಕು ಅಮಲ್ದಾರ್	ಚೇರ್ಮನ್ ಯಾ ಅಧ್ಯಕ್ಷ.
2.	ಹೋಬಳಿ ಶೇಕದಾರ್	ಸಭಿಕ.
3.	ಮಿ॥ ತಿಮ್ಮಪ್ಪ, ಶಾನುಭೋಗ	ಡಿಟೋ
4.	,, ರುದ್ರೇಗೌಡ, ಪಟೇಲ್ ಮತ್ತು ಜಮೀರ್ದಾರ್	ಡಿಟೋ
5.	,, ಶಂಕರಪ್ಪ, ಜಮೀರ್ದಾರ್	ಡಿಟೋ
6.	,, ತಿಮ್ಮಪ್ಪಯ್ಯಂಗಾರ್, ಸ್ಕೂಲ್ ಮ್ಯಾಸ್ಟರ್	ಡಿಟೋ

ಲಕ್ಕುವಳ್ಳಿ ಯೂನಿಯರ್ಡ್—

1.	ತಾಲ್ಲೂಕು ಅಮಲ್ದಾರ್	ಚೇರ್ಮನ್ ಯಾ ಅಧ್ಯಕ್ಷ.
2.	ಹೋಬಳಿ ಶೇಕದಾರ್	ಸಭಿಕ.
3.	ಮಿ॥ ವೆಂಕಟಗಿರಿಯಪ್ಪ, ಸ್ಕೂಲ್ ಮ್ಯಾಸ್ಟರ್	ಡಿಟೋ
4.	,, ಕೃಷ್ಣಪ್ಪ, ಪಟೇಲ್ ಮತ್ತು ಜಮೀರ್ದಾರ್	ಡಿಟೋ
5.	,, ಕೃಷ್ಣಸ್ವಾಮಿ ಪಿಳ್ಳೆ, ಜಮೀರ್ದಾರ್	ಡಿಟೋ
6.	,, ಅಮೀರ್‌ಸಾಬ್, ವರ್ತಕ	ಡಿಟೋ
7.	,, ಸೂರ್ಯಜೋಯಿಸರು, ಜಮೀರ್ದಾರ್	ಡಿಟೋ

ಶಿವನಿ ಯೂನಿಯರ್ಡ್—

1.	ತಾಲ್ಲೂಕು ಅಮಲ್ದಾರ್	ಚೇರ್ಮನ್ ಯಾ ಅಧ್ಯಕ್ಷ.
2.	ಹೋಬಳಿ ಶೇಕದಾರ್	ಸಭಿಕ.
3.	ಮಿ॥ ಪುರುದಪ್ಪ, ಪಟೇಲ್ ಮತ್ತು ಜಮೀರ್ದಾರ್	ಡಿಟೋ
4.	,, ವುಲ್ಲಯ್ಯ, ಜಮೀರ್ದಾರ್	ಡಿಟೋ
5.	,, ಬೈರಪ್ಪ, ಶಾನುಭೋಗ	ಡಿಟೋ
6.	,, ಲಕ್ಕಣ್ಣ, ಜಮೀರ್ದಾರ್	ಡಿಟೋ
7.	,, ನಾಗಣ್ಣ, ಜಮೀರ್ದಾರ್	ಡಿಟೋ

ಬಗುವಳ್ಳಿ ಯೂನಿಯರ್ಡ್—

1.	ತಾಲ್ಲೂಕು ಅಮಲ್ದಾರ್	ಚೇರ್ಮನ್ ಯಾ ಅಧ್ಯಕ್ಷ.
2.	ಹೋಬಳಿ ಶೇಕದಾರ್	ಸಭಿಕ.
3.	ಮಿ॥ ತಿಮ್ಮೆಗೌಡ, ಪಟೇಲ್	ಡಿಟೋ
4.	,, ಗುರುರಾವ್, ಜಮೀರ್ದಾರ್	ಡಿಟೋ
5.	,, ಚಿಕ್ಕಕರಿಯಪ್ಪ, ಜಮೀರ್ದಾರ್	ಡಿಟೋ
6.	,, ಕೃಷ್ಣಪ್ಪ, ಜಮೀರ್ದಾರ್	ಡಿಟೋ
7.	,, ರಾಮಯ್ಯ, ಸ್ಕೂಲ್ ಮ್ಯಾಸ್ಟರ್	ಡಿಟೋ

ಲಿಂಗದಹಳ್ಳಿ ಯೂನಿಯರ್ಡ್—

1.	ತಾಲ್ಲೂಕು ಅಮಲ್ದಾರ್	ಅಧ್ಯಕ್ಷ.
2.	ಹೋಬಳಿ ಶೇಕದಾರ್	ಸಭಿಕ.
3.	ಮಿ॥ ನಂಜಪ್ಪ, ಪಟೇಲ್	ಡಿಟೋ
4.	,, ಕಳ್ಳಿಗೌಡ, ಜಮೀರ್ದಾರ್	ಡಿಟೋ
5.	,, ಗೋಪಾಲಯ್ಯ, ಜಮೀರ್ದಾರ್	ಡಿಟೋ
6.	,, ಚಂದಪ್ಪ, ಜಮೀರ್ದಾರ್	ಡಿಟೋ
7.	,, ರಾಮಪ್ಪ, ಸ್ಕೂಲ್ ಮ್ಯಾಸ್ಟರ್	ಡಿಟೋ

ತರೀಕೆರೆ ತಾಲ್ಲೂಕು.

ಮೊರಲೆ ಯೂನಿಯರ್ಟ್—

1.	,, ತಾಲ್ಲೂಕು ಅಮಲ್ದಾರ್	ಅಧ್ಯಕ್ಷ.
2.	,, ಹೋಬಳಿ ಕೇಕಚಾರ್	ಸಭಿಕ.
3.	ಮಿ॥ ಸೂರಪ್ಪ, ಶಾನುಭೋಗ್	ಡಿಟೋ
4.	,, ಕಲ್ಲೇಗೌಡ, ಪಟೇಲ್	ಡಿಟೋ
5.	,, ಚನ್ನೆಗೌಡ, ಜಮ್ಮಿದಾರ್	ಡಿಟೋ
6.	,, ಹುಲ್ಲಕಟ್ಟು, ಜಮ್ಮಿದಾರ್	ಡಿಟೋ
7.	,, ಚಂಬೆಗೌಡ, ಜಮ್ಮಿದಾರ್	ಡಿಟೋ

ಕಳಸಾಪುರ ಯೂನಿಯರ್ಟ್—

1.	ತಾಲ್ಲೂಕು ಅಮಲ್ದಾರ್	ಅಧ್ಯಕ್ಷ.
2.	ಹೋಬಳಿ ಕೇಕದಾರ್	ಸಭಿಕ.
3.	ಮಿ॥ ತಿಮ್ಮಪ್ಪಯ್ಯ, ಶಾನುಭೋಗ್	ಡಿಟೋ
4.	,, ಕೃಷ್ಣಪ್ಪ, ಪಟೇಲ್	ಡಿಟೋ
5.	,, ಲಿಂಗಣ್ಣಯ್ಯ, ಜಮ್ಮಿದಾರ್	ಡಿಟೋ
6.	,, ಅನಂತರಾವ್ಯೆಯ್ಯ, ಜಮ್ಮಿದಾರ್	ಡಿಟೋ
7.	,, ರಂಗೆಗೌಡ, ಜಮ್ಮಿದಾರ್	ಡಿಟೋ
8.	,, ಈರಣ್ಣ, ಜಮ್ಮಿದಾರ್	ಡಿಟೋ

ಅಂಬಳೆ ಯೂನಿಯರ್ಟ್—

1.	ತಾಲ್ಲೂಕು ಅಮಲ್ದಾರ್	ಅಧ್ಯಕ್ಷ.
2.	ಹೋಬಳಿ ಕೇಕದಾರ್	ಸಭಿಕ.
3.	ಮಿ॥ ಮಂಜಯ್ಯ, ಶಾನುಭೋಗ್	ಡಿಟೋ
4.	,, ಸೀತಾರಾಮಯ್ಯ, ಪಟೇಲ್	ಡಿಟೋ
5.	,, ಚನ್ನಬಸವಗೌಡ, ಜಮ್ಮಿದಾರ್	ಡಿಟೋ
6.	,, ಹುಲಿಗೌಡ, ಜಮ್ಮಿದಾರ್	ಡಿಟೋ
7.	,, ಚಿಕ್ಕಣ್ಣ, ಜಮ್ಮಿದಾರ್	ಡಿಟೋ

ತಾರೀಖು 21ನೆ ಸೆಪಟಂಬರ್ 1907.

ನಂ. 2655—ಎಲ್. ಬಿ. 63-07—2, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ಸ್ ರೆಗುಲೇಷನಿನ ಮತ್ತು ಅದಕ್ಕನುಸಾರವಾಗಿ ಮಾಡಿದ ನಿಬಂಧನೆಗಳ ಉದ್ದೇಶಾರ್ಥಕ್ಕಾಗಿ, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಇದರಡಿ ಕಂಡ ಗ್ರಾಮಗಳನ್ನು ಯೂನಿಯರ್ಟ್‌ಗಳನ್ನಾಗಿ ವಿಭಜಿಸಿ ಇದೆಯೆಂದು ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಮೂಲಕ ಪ್ರಕಟಿಸಿ ಇದೆ :—

(a) ತರೀಕೆರೆ ತಾಲ್ಲೂಕು.	(b) ಚಿಕ್ಕಮಗಳ್ಳೂರು ತಾಲ್ಲೂಕು.
1. ಕುಡೂರು.	1. ಮರಲೆ
2. ಲಕ್ಕವಳ್ಳಿ	2. ಕಳಸಾಪುರ.
3. ತಿವನಿ.	3. ಅಂಬಳೆ.
4. ಬಗ್ಗವಳ್ಳಿ.	
5. ಲಿಂಗದಹಳ್ಳಿ.	

ತಾರೀಖು 23ನೆ ಸೆಪಟಂಬರ್ 1907.

ನಂ. ಜೆ. 908—ಪೊ. 44-07—2, ಕೋಲಾರದ ಚಿನ್ನದ ಮೈದಾನಗಳ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಎಸ್. ಎಂ. ಪ್ರಿಚರ್ಡ್‌ಯವರನ್ನು, ಮದ್ರಾಸ್ ಸರ್ಕಾರದ ಕೆಲಸಕ್ಕೆ ವಾಪಸು ಕಳುಹಿಸಲ್ಪಟ್ಟ ಮ್ಹಿ॥ ಪಿ. ಬಿ. ತಾಮ್ಪಸ್ ಯ್ಯವರ್ಗೆ ಬದಲಾಗಿ 1907ನೆ ಇಸವಿಯ ಸೆಪಟಂಬರ್ 1ನೆ ತಾರೀಖಿನ ಲಾಗಾಯಿತು ಸದರಿ ಚಿನ್ನದ ಮೈದಾನಗಳ ಪೋಲೀಸ್ ಸೂಪರಿಂಟೆಂಡೆಂಟಾಗಿ ಮೊಕರರ್ರಾಡಿ ಇದೆ.

ತಾರೀಖು 13ನೆ ಸೆಪಟಂಬರ್ 1907.

ನಂ. ರೆ. 1953—ಲ್ಯಾ. ರೆ. 11-07—5, 1907ನೆ ಇಸವಿಯ ಜುಲೈ 10ನೆ ತಾರೀಖಿನ ರೆ. 321—ಲ್ಯಾ. ರೆ. 11-07—3ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಅರಸಿಕೆರೆ ತಾಲ್ಲೂಕಿನ ಅಮಲ್ದಾರ್ ಮಿ॥ ಕೆ. ಶ್ರೀನಿವಾಸರಾಯರಿಗೆ ಕೊಟ್ಟ ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಳ್ಳದೆ ಇರುವ ಸಬಬು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 13ನ ಸೆಪಟ್ಟಂಬರ್ 1907.

ನಂ. ರೆ. 1997 - ಫಾ. 31-07—13, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ॥ ಬಿ. ರಾಮಸ್ವಾಮಿ ಐಯ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 14ನ ಸೆಪಟಂಬರ್ 1907.

ನಂ. ರೆ. 2044—ಲ್ಯಾ. ರೆ. 16-07 - 4, 1907ನೆ ಇಸವಿಯ ಜುಲೈ 12ನೆ ತಾರೀಖಿನ ರೆ. 359—ಲ್ಯಾ. ರೆ. 16-07—2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾವೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ಮಿ॥ ಎ. ಕೃಷ್ಣ ಅರಸಿನವರಿಗೆ ಕೊಟ್ಟ 1 ತಿಂಗಳು 19 ದಿವಸಗಳ ಪ್ರಿವಿಲೇಜ್ ರಜಾವನ್ನು ಈ ಮೂಲಕ ಇನ್ನೂ ಎರಡು ದಿವಸಗಳ ವರೆಗೆ ಹೆಚ್ಚಿಸಿ ಇದೆ.

ತಾರೀಖು 14ನೆ ಸೆಪಟಂಬರ್ 1907.

ನಂ. ರೆ. 2075 - ಲ್ಯಾ. ರೆ. 20-07—8, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿಗೆ ಈಗ ವರ್ಗಾಯಿಸಲ್ಪಟ್ಟಿರುವ ಅಮಲ್ದಾರ್ ಮಿ॥ ಎಂ. ರಂಗನಾಥರಾವ್, ಬಿ. ಎ, ಯವರನ್ನು ಕಾನಕಾನಹಳ್ಳಿ ತಾಲ್ಲೂಕಿಗೆ ವರ್ಗಾಯಿಸಿ ಇದೆ.

ರಜಾ ಮುಗಿದ ತರುವಾಯ ವರ್ಗಾಯಿಸಲ್ಪಟ್ಟ ಕೆಲಸದ ಮೇಲೆ ಹಾಜರಾಗತಕ್ಕದ್ದು.

2. ಅಮಲ್ದಾರ್ ಮಿ॥ ಎಂ. ಕೃಷ್ಣರಾಯರನ್ನು ಕಾನಕಾನಹಳ್ಳಿ ತಾಲ್ಲೂಕಿನಿಂದ ಅರಕಲಗೂಡು ತಾಲ್ಲೂಕಿಗೆ ವರ್ಗಾಯಿಸಿ ಇದೆ.

ತಾರೀಖು 16ನೆ ಸೆಪ್ಟಂಬರ್ 1907.

ನಂ. 2077—ಲ್ಯಾ. ರೆ 155-07—2, ಮಿ॥ ಕೆ. ಶ್ರೀಕಂಠಯ್ಯನವರು ಪ್ರಿವಿಲೇಜ್ ರಜಾವಿನ ಮೇಲೆ ಇರುವವರೆಗೆ ಬದಲಿ ಅಸಿಸ್ಟೆಂಟ್ ಕಮಿಷನರಾಗಿ ಕಡೂರು ಡಿಸ್ಟ್ರಿಕ್ಟಿಗೆ ಹಾಕಲ್ಪಟ್ಟಿರುವ ಮಿ॥ ಎ. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ, ಯವರು ಇನ್ನೂ ಹಾಸನದ ಡಿಸ್ಟ್ರಿಕ್ಟಿನಲ್ಲಿಯೇ ಇದ್ದು, ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ಎ. ನಾರಾಯಣಸ್ವಾಮಿಯ್ಯಂಗಾರ್ ಕ್ಯಾಶ್ಯುಯಲ್ ರಜಾವಿನಿಂದ ವಾಪಸು ಬಂದು ಚಾರ್ಜ್ ವಹಿಸುವ ತನಕ, ಸಕಲೇಶಪುರದ ಸಬ್ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 16ನೆ ಸೆಪಟಂಬರ್ 1907.

ನಂ. ರೆ. 2079—ಲ್ಯಾ. ರೆ. 129-07—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮಿ॥ ವಿ. ಎಸ್. ಗುರುರಾಯರಿಗೆ 1907ನೆ ಇಸವಿಯ ಆಗಸ್ಟು 6ನೆ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಮಿ॥ ಗುರುರಾಯರು ರಜಾವಿನ ಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಎಸ್. ಶ್ರೀನಿವಾಸೈಯ್ಯಂಗಾರ್‌ನನ್ನು ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವಂತೆ ವೊಕರರ್ನ್ಮಾಡಿ ಇದೆ.

ಸದರಿ ಡೆಪ್ಯುಟಿ ಅಮಲ್ದಾರ್ರು ಬೇರೆ ಕೆಲಸದ ಮೇಲೆ ಇರುವಾಗ ಶ್ರೀರಂಗಪಟ್ಟಣದ ತಾಲ್ಲೂಕಿನ ಅಮಲ್ದಾರ್ರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 17ನೆ ಸೆಪ್ಟಂಬರ್ 1907.

ನಂ. ರೆ. 2091—ಲ್ಯಾ. ರೆ. 590-06—7, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ: ಇದರಡಿ ವಿವರಿಸುವ ಮತ್ತು 22 ಎಕರೆ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಸಲಕ್ಕೆ. ಎಂದರೆ ಮಣ್ಣೆಮಾರಿ ಅಮೃತಮಹಲ್ ಕಾವಲಿಗೆ ಸೇರಿಸುವದಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು	ಸರ್ವೆ ನಂಬರು.	ಪಾಲಿಗೆ ಪರಿಯಂತ ಬಾಗಾಯಿತು ಪೋಡಿ	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರಕಾರಕ್ಕೆ ಪಿಕಾಸ್ತು ಆಗುವ ವಿಸ್ತೀರ್ಣ	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ತುಮಕೂರು	ಗುಬ್ಬಿ	ಜೇಳೂರು	ಮಣ್ಣೆಮಾರಿ	ಹುಚ್ಚೆಗೌಡ ಬಿ॥ ಚೆನ್ನೆಗೌಡ ಗುಬ್ಬಿ ಸಮ್ಮತಿ ನ ಸೇರ್ವೆಗಾರ, ಪಾಳ್ಯದ ವಾಸಿ	20		11 37	9 8	11 37	ಸರ್ವೆ ನಂ. 21	ಸರ್ವೆ ನಂ. 19	ಸರ್ವೆ ನಂ. 18	ಅಮೃತ ಮಹಲ್ ಕಾವಲು
					21	ಪೋಡಿ	10 3	8 0	10 3	ಮಣ್ಣೆಮಾರಿ ಅಮೃತಮಹಲ್ ಕಾವಲು	ಸರ್ವೆ ನಂ. 20	ಮಣ್ಣೆಮಾರಿ ಅಮೃತಮಹಲ್ ಕಾವಲು	ಡಿಟೋ

ತಾರೀಖು 19ನೆ ಸೆಪಟಂಬರ್ 1907.

ನಂ. ರ. 2122—ಕೋ. 48-07—2, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರ್ ವರ್ಗಾವರ್ಗಗಳನ್ನು ಮಂಜೂರ್ಮಾಡಿ ಇದೆ :—

ಮಿ॥ ಮಹಮದ್ ರಜಾಯವರನ್ನು ಶಿವಮೊಗ್ಗದಿಂದ ಚಿತ್ರದುರ್ಗಕ್ಕೆ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿಗೆ ಹಾಕಿ ಇದೆ.

ಮಿ॥ ಬಿ. ಭೀಮರಾಯರನ್ನು ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಎಕ್ಸೈಜು ಇಲಾಖೆಯ ಕೆಲಸಕ್ಕೆ ಹಾಕಿ ಇದೆ.

ಮಿ॥ ಆರ್. ಟಿ. ಮಹದೇವರಾಯರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಎಕ್ಸೈಜು ಇಲಾಖೆಯಿಂದ ಜನರಲ್ ಡ್ಯೂಟಿ ಯಾ ಸಾಮಾನ್ಯ ಕೆಲಸಕ್ಕೆ ಹಾಕಿ ಇದೆ.

ಹುಕುಂ ಖಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 18ನೆ ಸೆಪಟಂಬರ್ 1907.

ನಂ. 894—6652, ಸ್ಪೆಷಲ್ ಡ್ಯೂಟಿ ಮೇಲೆ ಇರುವ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ವಿ. ಹೆಚ್. ಕರ್ಪ್ಪಿ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸ॥ 1907ನೆ ಆಗಸ್ಟು 26ನೆ ತಾರೀಖು 814—6078ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಆಗಸ್ಟು 10ನೆ ತಾರೀಖಿನಾರಭ್ಯ ಕೊಟ್ಟಿದ್ದ ಬಂದು ತಿಂಗಳು ಪ್ರಿವಿಲೇಜ್ ರಜವನ್ನ ಇನ್ನೂ 11 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಖಮೋಜೀಬ್,

ಬರ್ನಾರ್ಡ್ ಥಾಮಸ್ ಕ್ಯಾಪ್ಪ್ಲ್ ಆರ್. ಇ.,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.